# ಹೊಸತು



## ಪ್ರೇಮಿಗಳಿಗಾಗಿ ಟೈಟಾನ್ ವಾಚ್

ವ್ಯಾಲೆಂಟೈನ್ಸ್ ಡೇ ವಿಶೇಷ ದಿನಕ್ಕಾಗಿಯೇ ಟೈಟಾನ್‌ನ ಟ್ಯಾಗಡ್ ಸರಣಿಯ ಹೊಸ ಕೈಗಡಿಯಾರಗಳನ್ನು ಯುವಕ, ಯುವತಿಯರಿಗಾಗಿ ಹೊರತಂದಿದೆ. ಯುವ ಪೀಳಿಗೆಯನ್ನು ಪ್ರತಿಬಿಂಬಿಸಲು ಹಲವಾರು ಬಣ್ಣಗಳಿಂದ ಕೂಡಿದ ವಾಚ್‌ಗಳು ಈ ಸಂಗ್ರಹದಲ್ಲಿ ಲಭ್ಯ. ಟೈಟಾನ್ ವಾಚ್‌ಗಳ ಬೆಲೆ ₹ 1495 ನಿಂದ ಆರಂಭ. ಜನರ ಅಭಿರುಚಿಗೆ ತಕ್ಕಂತೆ ಆಯ್ಕೆ ಮಾಡಿಕೊಳ್ಳಬಹುದಾಗಿದೆ.

ವಿವರಕ್ಕೆ: 91 9900042087, 91 72592 55677



## ಈ ಬೈಕ್ ಬೆಲೆ 5 ಲಕ್ಷ..!

ಈ ಬೈಕ್ ಹೆಸರು ಅಕ್ವಿಲೊ ಪ್ರೊ ಸೂಪರ್ ಬೈಕ್. ಇದು ಸ್ಪೋರ್ಟ್ಸ್ ಬೈಕ್ ಆಗಿದ್ದು, ಈ ಮಾಡೆಲ್ ಜತೆಗೆ ಜಿಟಿ 650ಆರ್ ಎಂಬ ಮತ್ತೊಂದು ಮಾಡೆಲ್‌ನ ಬೈಕ್ ಕೂಡ ಬಿಡುಗಡೆಯಾಗಿದೆ. ಡಿಎಸ್‌ಕೆ ಹ್ಯೋಸಂಗ್ ಕಂಪೆನಿ ಈ ಸೂಪರ್ ಬೈಕ್‌ಗಳನ್ನು ಬಿಡುಗಡೆ ಮಾಡಿದ್ದು, ಕೆಂಪು, ಬೆಳ್ಳಿ ಮತ್ತು ಕಪ್ಪು ಮೂರು ಬಣ್ಣಗಳಲ್ಲಿ ಸಿಗುತ್ತದೆ.

ನೋಟ, ತಂತ್ರಜ್ಞಾನ ಮತ್ತು ವಿಶಿಷ್ಟ ಗುಣಲಕ್ಷಣಗಳಿಂದ ಕೂಡಿದ ಈ ಬೈಕ್, ಅಸಾಧಾರಣ ಸ್ಥಿರತೆ ಮತ್ತು ಸಮತೋಲನವನ್ನು ಹೊಂದಿದೆ. ಇದನ್ನು ಅತ್ಯಂತ ಆರಾಮ ಸವಾರಿಗೆಂದೇ ವಿನ್ಯಾಸಗೊಳಿಸಲಾಗಿದೆ. ಈ ಬೈಕಿನ ಇನ್ನೊಂದು ಆಕರ್ಷಕ ಲಕ್ಷಣವೆಂದರೆ ಕ್ರೋಮ್‌ನ ವಿಫುಲ ಬಳಕೆ. ಹಾಗಾಗಿ ಅದು ಝುಗಮಗಿಸುತ್ತದೆ. ಅವಳಿ–ಸಿಲಿಂಡರ್ ಶಕ್ತಿ, ತೈಲದಿಂದ ತಣ್ಣಗಾಗುವ 4–ಸ್ಟ್ರೋಕ್ ಇಂಜಿನ್ ಉಳ್ಳ ಅಕ್ವಿಲೊ ಪ್ರೊ ಗರಿಷ್ಠ 748ಬಿಎಚ್‌ಪಿ ಶಕ್ತಿಯನ್ನು 9,000 ಆರ್‌ಪಿಎಂನಲ್ಲಿ ಮತ್ತು ಗರಿಷ್ಠ ಟಾರ್ಕ್ 62.1ನ್ನು 7,500 ಆರ್‌ಪಿಎಂನಲ್ಲಿ ಉತ್ಪಾದಿಸುತ್ತದೆ. ಬೈಕಿನ ಅತ್ಯುನ್ನತ ವೇಗ ಗಂಟೆಗೆ 195 ಕಿಮೀ. ಎಂದು ವಿವರ ನೀಡುತ್ತದೆ ಕಂಪೆನಿ.

ಬೆಲೆ ₹ 4,99,000. ಈಗ ದೆಹಲಿಯಲ್ಲಿ ಸಿಗುತ್ತಿದ್ದು, ಎಲ್ಲ ಮಹಾನಗರಗಳಲ್ಲೂ ಸದ್ಯದಲ್ಲೇ ಲಭ್ಯವಾಗಲಿದೆ.

ಮಾಹಿತಿಗೆ: 9900594594





## ವಿನೆಗರ್ ಫ್ಯಾಷನ್ ಸಂಗ್ರಹ

ವ್ಯಾಲೆಂಟೈನ್ ದಿನಕ್ಕಾಗಿಯೇ ವಿನೆಗರ್ ಹಲವು ಫ್ಯಾಷನೆಬಲ್ ಉತ್ಪನ್ನಗಳನ್ನು 'ಕ್ಯುಪಿಡ್ ಶೂಟರ್ಸ್' ಹೆಸರಿನಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. 'ಸೆಕ್ಸಿ ಕಲರ್' ಎಂದೇ ಪ್ರತಿಬಿಂಬಿಸಲಾಗಿರುವ ಕಡುಗೆಂಪು ಬಣ್ಣದ ಟ್ಯುನಿಕ್ ಟಾಪ್‌ಗಳು, ವಾಚ್, ಪಾದರಕ್ಷೆ, ಬ್ರೇಸ್‌ಲೆಟ್ ಮುಂತಾದ ಉತ್ಪನ್ನಗಳು ಇದರಲ್ಲಿವೆ. ವ್ಯಾಲೆಂಟೈನ್ ದಿನ ಕ್ಯಾಂಡಲ್‌ಲೈಟ್ ಪಾರ್ಟಿಗಾಗಿ ಇದನ್ನು ಬಳಸಬಹುದು ಎಂದು ಕಂಪೆನಿ ಹೇಳಿದೆ.

ವಿವರಕ್ಕೆ: 080– 22682288





## ಹೊಸ ಇಲೈಟ್ ವಾಚ್

ಕ್ರೋನೊ ವಾಚ್ ಕಂಪೆನಿ ವ್ಯಾಲೆಂಟೈನ್ ಡೇ ಗಾಗಿಯೇ ಹೊಸ ಇಲೈಟ್ ವಾಚ್‌ಗಳನ್ನು ಬಿಡುಗಡೆ ಮಾಡಿದೆ. ಫ್ರಾನ್ಸ್ ಮೂಲದ ಕಂಪೆನಿ ಇದಾಗಿದ್ದು, ಪ್ರೇಮಿಗಳ ಡ್ರೆಸ್‌ಗಳಿಗೆ ಸರೊಹೊಂದುವಂತ ವಾಚ್‌ಗಳು ಇದರಲ್ಲಿ ಲಭ್ಯ. ಪ್ರಣಯಿಗಳಿಗೆ ಉಡುಗೊರೆಯಾಗಿಯೂ ಇದನ್ನು ನೀಡಬಹುದು. ಬೆಲೆ ₹ 6,700. ಪಿಂಕ್, ಕಪ್ಪು ಮುಂತಾದ ಬಣ್ಣಗಳಲ್ಲಿ ಸಿಗುತ್ತದೆ.

ವಿವರಕ್ಕೆ: www.chronowatchcompany.com